ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಯಾರು ಇದಕ್ಕೆ ಕಾರಣೀಭೂತರಾಗಿದ್ದಾರೆ ಅವರ ಬೇರುಗಳನ್ನು ಸೂಕ್ಷ್ಮವಾಗಿ ನಾವು ಭೇಧಿಸಿ ಪೋಲೀಸ್ ಇಲಾಖೆ, ಪೋಲೀಸಿನವರು ಈ ದಿಸೆಯಲ್ಲಿ ತಪ್ಪಿತ್ತಸ್ಥರ ವಿರುದ್ಧವಾದಂಥ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಕಾಲದಲ್ಲಿಯೇ ಇದನ್ನೇ ಒಂದು ಕಾರಣವನ್ನಾಗಿ ಮಾಡಿಕೊಂಡು ಮಿಕ್ಕ ನಗರ ಪ್ರದೇಶಗಳಲ್ಲಿ, ಮಿಕ್ಕ ಪ್ರದೇಶಗಳಲ್ಲಿ ಇದರ ಬಗ್ಗೆ ನಾವು ಪ್ರತಿರೋಧವನ್ನು ವ್ಯಕ್ತಪಡಿಸತಕ್ಕಂಥಾದ್ದು ಸಾರ್ವತ್ರಿಕವಾದದ್ದು. ಆದ್ದರಿಂದ ಶಾಂತಿಯುತವಾದಂಥ ಪ್ರತಿಭಟನೆಯನ್ನು ಮಾಡಲಿಕ್ಕೆ ಸರ್ಕಾರ ಅವಕಾಶ ಕೊಡುತ್ತದೆ. ಆದರೆ ಇದನ್ನೇ ಒಂದು ಕಾರಣವನ್ನಾಗಿ ಮಾಡಿಕೊಂಡು ಸಮಾಜದಲ್ಲಿ ಮತ್ತೆ ಒಂದು ದೊಡ್ಡ ದಳ್ಳುರಿಯನ್ನು ಮಾಡಲಿಕ್ಕೆ ನಾವು ಅವಕಾಶವನ್ನು ಕೊಡತಕ್ಕಂಥಾದ್ದು ಸಾಧ್ಯವಿಲ್ಲ. ಮಾನ್ಯ ಸೋಮಶೇಖರ್‌ರವರು ಮತ್ತು ಮಾನ್ಯ ಕರಡಿಸಂಗಣ್ಣನವರು ಮತ್ತು ಮಾನ್ಯ ಸಿಂಧ್ಯಾರವರು ಹಾಗೂ ಶ್ರೀಮತಿ ಅನುಸೂಯಮ್ಮನವರು ಇದರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಈ ಕಳಕಳಿಗೆ ನಾನು ಸ್ಪಂದಿಸುತ್ತೇನೆ. ಮಾನ್ಯ ಸೋಮಶೇಖರ್ ಅವರು ಹೇಳಿದರು. ಏನೆಂದರೆ ಈ ಪ್ರತಿಮೆಗಳ ರಕ್ಷಣೆಗೆ ನಾವು ವಿಶೇಷವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇದು ನಾವೆಲ್ಲರೂ ಒಟ್ಟಾರೆ ಸೇರಿ ಹೇಗೆ ರಕ್ಷಣೆ ಮಾಡುವುದಕ್ಕೆ ಸಾಧ್ಯ? ಈಗ ಒಂದು ಜಾತ್ರೆ ಮೈದಾನದಲ್ಲಿ ಒಂದು ಮೂರ್ತಿಯನ್ನು ಹಾಕಿರುತ್ತಾರೆ. ಅಲ್ಲಿ ಪೋಲೀಸ್ ಸ್ಟೇಷನ್ ಎದುರಿಗಿದ್ದರೆ ಪೋಲೀಸಿನವರು ಅದರ ರಕ್ಷಣೆ ಕಾರ್ಯಭಾರವನ್ನು, ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಆದರೆ ಬೇರೆ ಕಡೆ ಇದ್ದರೆ ಹೇಗೆ? ಕೆಲವೊಂದು ಸಾರಿ ಡಾ|| ಬಾಬಾಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಅಪಾರ ಅಭಿಮಾನದಿಂದ ಕೆಲವೊಂದು ಕಾಲೋನಿಗಳಲ್ಲಿ, ಕೆಲವೊಂದು ಪ್ರದೇಶಗಳಲ್ಲಿ ಅವರ ಈ ಪ್ರತಿಮೆಗಳನ್ನು ಮಾಡಿರುತ್ತಾರೆ. ಅಂತಹ ಪ್ರದೇಶಗಳಲ್ಲಿ ನಾವು ವಿಶೇಷವಾದಂಥ ರಕ್ಷಣೆಯನ್ನು ಕೊಡಲಿಕ್ಕೆ ಹೇಗೆ ಸಾಧ್ಯವಾಗಬಹುದು ಎನ್ನುವುದರ ಬಗ್ಗೆ ತಾವು ಸಲಹೆ ಸೂಚನೆಗಳನ್ನು ನಮಗೆ ಕೊಟ್ಟರೆ ಅದನ್ನು ನಾವು ಬಹಳ ಜವಾಬ್ದಾರಿಯುತವಾದ ರೀತಿಯಲ್ಲಿ ಪರಿಶೀಲನೆ ಮಾಡುತ್ತೇವೆ. ಕೊಪ್ಪಳದ ಈ ಭಾಗದಲ್ಲಿ ನಡೆದಿರತಕ್ಕಂಥ ಈ ಘಟನೆ ಬಗ್ಗೆ ಹೆಚ್ಚಿನ ವಿವರಗಳನ್ನು ನಮ್ಮ ಮಾನ್ಯ ಗೃಹಸಚಿವರು ಈ ಸದನಕ್ಕೆ ಒದಗಿಸಿಕೊಡುತ್ತಾರೆ. ಆದರೆ ನಾನು ಸೀಮಿತವಾದಂಥ ಉದ್ದೇಶದಿಂದ ಇಲ್ಲಿ ನಿಂತಿದ್ದೇನೆ. ಅದೇನೆಂದರೆ, ಇಂಥಾದ್ದನ್ನು ಸಾರ್ವತ್ರಿಕವಾಗಿ ಇಡೀ ಸದನ ಖಂಡಿಸುತ್ತದೆ. ಇದು ಒಂದು ಎಚ್ಚರಿಕೆಯ ರೂಪದಲ್ಲಿ ಕೂಡ ಇಡೀ ರಾಜ್ಯದಲ್ಲಿ ಈ ಕಿಡಿಗೇಡಿಗಳಿಗೆ ಇರಬೇಕು ಎನ್ನುವಂಥ ದೃಷ್ಟಿಯಿಂದ ನಾನು ಮಧ್ಯಪ್ರವೇಶ ಮಾಡಿದ್ದು, ಈ ಸದನದಿಂದ ಒಟ್ಟಾರೆ ನಮ್ಮ ಕಳಕಳಿ ಮತ್ತು ಕಳವಳ ಎರಡನ್ನೂ ಕೂಡ ನಾವು ಈ ರಾಜ್ಯಕ್ಕೆ ಹೇಳಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ವೆರಿಗುಡ್,

(ಆ) ರಾಜ್ಯದಲ್ಲಿ ಗುತ್ತಿಗೆದಾರರು ಪ್ರತಿಭಟನೆ ನಡೆಸುತ್ತಿರುವ ಬಗ್ಗೆ -

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು:- ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಇನ್ನೊಂದು ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಬಯಸುತ್ತೇನೆ. ಇವತ್ತು ಇಡೀ ರಾಜ್ಯದಲ್ಲಿ ಇರುವಂಥ ಕಂಟ್ರಾಕ್ಟರ್ಸ್ ತಮ್ಮ ಸಂಘದ ಮುಖಾಂತರ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದಾರೆ. ಬಹುಶಃ ಇದು ಪತ್ರಿಕೆಗಳಲ್ಲಿ ಬಂದಿದೆ ಮತ್ತು ಸರ್ಕಾರದ ಗಮನಕ್ಕೂ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಲ್ಲೇ ಇದ್ದಾರೆ. ಕೆಲವು ದಿವಸಗಳ ಹಿಂದೆ

ಮುಖ್ಯಮಂತ್ರಿಗಳು ತಮ್ಮ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಇವತ್ತು ರಾಜ್ಯದ ಆರ್ಥಿಕ ಸ್ಥಿತಿ ಬಹಳ ಗಂಭೀರವಾಗಿದೆ ಎನ್ನುವಂಥ ಮಾತನ್ನು ಅವರು ಹೇಳಿದ್ದಾರೆ. ಇವತ್ತು ಏನಾಗಿದೆ ಎಂದರೆ ಕಂಟ್ರಾಕ್ಟರ್ಸ್ ಮೂಲಕ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯಬೇಕು. ರಸ್ತೆ ಕಾಮಗಾರಿಗಳು ಇರಬಹುದು ಅಥವಾ ನೀರಾವರಿ ಇಲಾಖೆಯ ಕೆಲಸಗಳು ಇರಬಹುದು. ಬೇರೆ ಬೇರೆ ಅಭಿವೃದ್ಧಿ ಕೆಲಸಗಳು ಆ ಕಂಟ್ರಾಕ್ಟರ್ಸ್ ಮುಖಾಂತರ ಆಗಬೇಕಾಗುತ್ತದೆ. ಬಹುಶಃ ನಾವು ಈ ಕಂಟ್ರಾಕ್ಟರ್‌ಗಳಿಗೆ ಬಿಲ್ಸ್ ಪೇಮೆಂಟ್ ಮಾಡದಿದ್ದರೆ, ಹಣ ಕೊಡದಿದ್ದರೆ ಈ ಅಭಿವೃದ್ಧಿ ಕೆಲಸಗಳು ಎಲ್ಲಾ ನಿಂತುಹೋಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗಾಗಲೇ ಎಷ್ಟೋ ಕಡೆಗಳಲ್ಲಿ ಕೆಲಸಗಳು ನಿಂತುಹೋಗಿವೆ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲಿ ಇದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು ಮುನ್ನೂರು ಕೋಟಿ ರೂಪಾಯಿಗಳ ಬಿಲ್‌ಗಳು ಪೆಂಡಿಂಗ್ ಇವೆ. ನೀರಾವರಿ ಇಲಾಖೆಯಲ್ಲಿ ಏಳು ನೂರು ಕೋಟಿರೂಪಾಯಿಗಳಿಗೂ ಹೆಚ್ಚಿಗೆ ಬಿಲ್‌ಗಳು ಪೆಂಡಿಂಗ್ ಇವೆ. ನಮಗೆ ಬಂದ ಮಾಹಿತಿ ಪ್ರಕಾರ ಒಟ್ಟು 1200 ಕೋಟಿರೂಪಾಯಿಗಳಷ್ಟು ಹಣ ಕಂಟ್ರಾಕ್ಟ್‌ದಾರರಿಗೆ ಪಾವತಿ ಮಾಡಬೇಕಾಗಿರುವುದು ರಾಜ್ಯ ಸರ್ಕಾರದಿಂದ ಆಗಿಲ್ಲ. ಕಳೆದ ಏಳೆಂಟು ತಿಂಗಳುಗಳಿಂದ ಇಷ್ಟು ಪೆಂಡಿಂಗ್ ಇದೆ. ಹಾಗಾದರೆ ನಾಳೆ ಅಭಿವೃದ್ಧಿ ಕೆಲಸಕಾರ್ಯಗಳು ಹೇಗೆ ನಡೆಯಬೇಕು? ಇದರ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟನೆ ನೀಡಬೇಕಾಗುತ್ತದೆ. ಅಲ್ಲದೆ ಇವತ್ತು ಸರ್ಕಾರ ಆರ್ಥಿಕ ದುಸ್ಥಿತಿಯ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಅಥವಾ ಇವತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಒಂದು ಶ್ವೇತಪತ್ರವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೊರಡಿಸಬೇಕಾಗುತ್ತದೆ. ನಮ್ಮ ಆರ್ಥಿಕ ಪರಿಸ್ಥಿತಿ ಏನು ಎನ್ನುವಂಥಾದನ್ನು ಅವರು ಈ ಮೂಲಕ ತಿಳಿಸಬೇಕು. ನನಗೆ ಬಂದಿರುವ ಮಾಹಿತಿ ಪ್ರಕಾರ ಬಹುಶಃ ಬೇರೆ ಯಾವುದೇ ಒಂದು ಸಂಸ್ಥೆಯಿಂದ ರಾಜ್ಯಸರ್ಕಾರ ಸಾಲವನ್ನು ತೆಗೆದುಕೊಳ್ಳದಿದ್ದರೆ, ನೂರಾರು ಕೋಟಿ ರೂಪಾಯಿಗಳ ಸಾಲ ತೆಗೆದುಕೊಳ್ಳದೇ ಇದ್ದರೆ ಮುಂದಿನ ತಿಂಗಳು ನೌಕರದಾರರಿಗೆ ಪಗಾರ ಕೊಡಲಾರದಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎನ್ನುವಂಥಾದ್ದು ಗಂಭೀರವಾದಂಥ ವಾತಾವರಣ ಇದೆ. ಹೀಗಾಗಿ ರಾಜ್ಯ ಸರ್ಕಾರ ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ ಮತ್ತು ಇನ್ನೊಂದು ವಿಚಾರ ನನ್ನ ಗಮನಕ್ಕೆ ಬಂದಿರುವ್ಥಂಥಾದ್ದು ಏನೆಂದರೆ ಈಗ ಏಳೆಂಟು ತಿಂಗಳುಗಳಿಂದ 1200 ಕೋಟಿ ರೂಪಾಯಿಗಳ ಬಿಲ್ಸ್ ಪೇಮೆಂಟ್ ಆಗಿಲ್ಲ ಎನ್ನುವುದು ಒಂದು. ಇವತ್ತು ನನ್ನ ಕಡೆ ಒಂದಿಷ್ಟು ಕಾಗದಪತ್ರಗಳು ಬಂದಿವೆ. ಅದರ ಪ್ರಕಾರ ಇವತ್ತು ಯಾರು ಕಂಟ್ರಾಕ್ಟರ್ಸ್ ಮಲೆನಾಡು ಅಭಿವೃದ್ಧಿ ಮಂಡಳಿಯಲ್ಲಿ ಕೆಲವು ಕೆಲಸಗಳನ್ನು ಏನು ಮಾಡಿದ್ದಾರೆ. ಆ ಕೆಲಸಗಳಿಗೆ ಪೇಮೆಂಟ್ ಮಾಡಿದ್ದಾರೆ ಮತ್ತು ಚೆಕ್ಕುಗಳನ್ನು ಕೂಡ ಈಗಾಗಲೇ ಕೊಟ್ಟಿದ್ದಾರೆ. ನಲವತ್ತು ಲಕ್ಷ ರೂಪಾಯಿಗಳ ಮೊತ್ತದ ಏಳೆಂಟು ಚೆಕ್ಕುಗಳನ್ನು ಕೊಟ್ಟಿದ್ದು, ಒಂದೂವರೆ ತಿಂಗಳ ಹಿಂದೆ ಅವರು ಬ್ಯಾಂಕಿಗೆ ಅದನ್ನು ಸಂದಾಯ ಮಾಡಿದ್ದಾರೆ. ಆದರೆ ಇವತ್ತು ಅಲ್ಲಿ ಶಿವಮೊಗ್ಗ ಟ್ರೆಜರಿಗೆ ಈ ಚೆಕ್ಕುಗಳು ಹೋದರೆ ಅವುಗಳು ರಿಟರ್ನ್ ಆಗಿ ಬಂದಿದೆ.ಇವತ್ತಿನವರೆಗೂ ಅವು ಕ್ಲಿಯರೆನ್ಸ್ ಆಗಿಲ್ಲ. ಕಳೆದ ಒಂದೂವರೆ ತಿಂಗಳಿಂದ ಆ ಚೆಕ್ಕುಗಳು ಟ್ರೆಜರಿಯಲ್ಲೇ ಉಳಿದಿವೆ. ಇಂತಹ ಒಂದು ಏಳೆಂಟು ಚೆಕ್ಕುಗಳು ನನ್ನಕಡೆಗೆ ಬಂದಿವೆ. ಇವತ್ತು ಅವುಗಳನ್ನು ಬ್ಯಾಂಕಿಗೆ ಸಬ್‌ಮಿಟ್ ಮಾಡಿದ್ದು ಅವುಗಳನ್ನು ಶಿವಮೊಗ್ಗ ಟ್ರೆಜರಿಗೆ ಕಳುಹಿಸಿದರೆ, ಅದು ಮಲೆನಾಡು ಅಭಿವೃದ್ಧಿ ಮಂಡಳಿಗೆ ಸಂಬಂಧಪಟ್ಟಂಥ ಹಣವಾಗಿದ್ದು, ಅವುಗಳನ್ನು

ಅವರು ಇನ್ನುವರೆಗೂ ಇಟ್ಟುಕೊಂಡು ಕುಳಿತಿದ್ದಾರೆ. ಟ್ರೆಜರಿಯಲ್ಲಿ ಕೇಳಿದರೆ ಅವರು ಏನು ಹೇಳುತ್ತಾರೆ ಎಂದರೆ ನಮಗೆ ರಾಜ್ಯಸರ್ಕಾರದಿಂದ ಸಧ್ಯಕ್ಕೆ ಇವನ್ನು ಕ್ಲಿಯರೆನ್ಸ್ ಮಾಡಬಾರದು ಎಂದು ಆದೇಶ ಬಂದಿದೆ ಎಂದು ಹೇಳುತ್ತಾರೆ. ಅವು ಚೆಕ್ಕುಗಳನ್ನು ಬೌನ್ಸ್ ಮಾಡುತ್ತಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ನಮ್ಮ ಸರ್ಕಾರದ ಅವಧಿಯಲ್ಲಿ ಯಾವುದೇ ಚೆಕ್ ಬೌನ್ಸ್ ಆಗಿಲ್ಲ ಹಿಂದೆ ಜನತಾದಳ ಸರ್ಕಾರ ಇದ್ದಾಗ ಬೌನ್ಸ್ ಆಗಿತ್ತು. ನಮ್ಮ ಸರ್ಕಾರ ಇದ್ದಾಗ ಯಾವುದೇ ಚೆಕ್ ಬೌನ್ಸ್ ಆಗಿಲ್ಲ ಎನ್ನುವಂಥ ಮಾತನ್ನು ಅವರು ಹೇಳಿದರು. ಈಗ ಒಂದೂವರೆ ತಿಂಗಳಿಂದ ಟ್ರೆಜರಿಯಲ್ಲಿ ಈ ಚೆಕ್ಕುಗಳನ್ನು ಕ್ಲಿಯರೆನ್ಸ್ ಮಾಡದೇ ಇಟ್ಟುಕೊಳ್ಳಬೇಕಾದರೆ, ಇದು ಬೌನ್ಸ್ ಅಂದರೂ ಒಂದೇ, ಅರ್ಥ ಒಂದೇ ಆಗುತ್ತದೆ. ಚಕ್ಕನ್ನು ಹಾಗೆಯೇ ಇಟ್ಟುಕೊಳ್ಳುವುದು ಬಂದೇ ಚೆಕ್ ಬೌನ್ಸ್ ಮಾಡಿದರೂ ಒಂದೇ. ಹೀಗಾಗಿ ಈ 1200 ಕೋಟಿ ರೂಪಾಯಿಗಳ ಮೊತ್ತದ ಚೆಕ್ಕುಗಳ ಕ್ಲಿಯರೆನ್ಸ್ ಬಗ್ಗೆ ಏನು ಮಾಡುತ್ತೀರಿ ಎಂದು ದಯವಿಟ್ಟು ಹೇಳಬೇಕಾಗುತ್ತದೆ. ಅಥವಾ ರಿಸೋರ್ಸಸ್ ಮೊಬಿಲೈಸೇಷನ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅವರೇ ಆರ್ಥಿಕ ಇಲಾಖೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ಆ ರಿಸೋರ್ಸಸ್ ಮೊಬಿಲೈಸೇಷನ್ ಮಾಡದೇ ಇದ್ದರೆ, ಈ ರಾಜ್ಯದ ಆರ್ಥಿಕ ಸ್ಥಿತಿಯನ್ನು ಸರಿದಾರಿಗೆ ತರದಿದ್ದರೆ, ಬಹುಶಃ ಮಾನ್ಯ ಮುಖ್ಯಮಂತ್ರಿಗಳಿಗೆ ಇವತ್ತು ನಾನು ಒತ್ತಾಯ ಮಾಡುವತ್ತಿದ್ದೇನೆ. ತಮಗೆ ಅಧಿಕಾರದಲ್ಲಿ ಉಳಿಯುವುದಕ್ಕೆ ನೈತಿಕ ಹಕ್ಕು ಇಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ತಾವು ರಾಜೀನಾಮೆಯನ್ನು ಕೊಟ್ಟು ಆಡಳಿತಾಧಿಕಾರವನ್ನು ಬಿಟ್ಟು ಬರಬೇಕಾಗುತ್ತದೆ. ಏಕೆಂದರೆ ಈ ರೀತಿಯ ಒಂದು ದುಸ್ಥಿತಿಯಲ್ಲಿ ಇರುವಂಥ ರಾಜ್ಯಸರ್ಕಾರವನ್ನು ನಡೆಸಲಿಕೆ ಆಗದಿದ್ದರೆ ಅವರು ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಮತ್ತು ಈ ಚೆಕ್ಕುಗಳು ಒಂದೂವರೆ ತಿಂಗಳಿಂದ ಟ್ರೆಜರಿಯಲ್ಲಿ ಏನು ಬಿದ್ದಿವೆ ಅವುಗಳ ಬಗ್ಗೆ ಏನು ಮಾಡುತ್ತೀರಿ ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ನಲವತ್ತು ಲಕ್ಷ ರೂಪಾಯಿಗಳ ಮೊತ್ತದ ಏಳೆಂಟು ಚೆಕ್ಕುಗಳನ್ನು ಈಗಾಗಲೇ ಪ್ರೆಸೆಂಟ್ ಮಾಡಿದ್ದಾರೆ. ಆದ್ದರಿಂದ ದಯವಿಟ್ಟು ಇದಕ್ಕೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ(ಕನಕಪುರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ದಿವಸ ಈ ಸಂದರ್ಭದಲ್ಲಿ ಸದನದಲ್ಲಿದ್ದಾರೆ ಬಹಳ ಸಂತೋಷ ಮೊದಲನೆಯದಾಗಿ, ಈ ಕಂಟ್ರಾಕ್ಟ್‌ದಾರರು ವಿರೋಧಪಕ್ಷದವರ ಕಡೆ ಹಗಲು ಹೊತ್ತಿನಲ್ಲಿ ಬರತಕ್ಕಂಥಾದ್ದು ಬಹಳ ಕಷ್ಟ ಸಂಕೋಚ ಮನೋಭಾವದಿಂದ ವಿರೋಧಪಕ್ಷದಲ್ಲಿರತಕ್ಕಂಥವರನ್ನು ನೋಡತಕ್ಕಂಥಾದ್ದು. ಆಡಳಿತ ಪಕ್ಷದಲ್ಲಿದ್ದಾಗ ಕಂಟ್ರಾಕ್ಟ್‌ದಾರರು ಸ್ವಲ್ಪ ಹತ್ತಿರದಲ್ಲಿಯೇ ಇರುತ್ತಾರೆ. ಅವರು ಬಿರುತ್ತಾರೆ. ಇದು ನನ್ನ ಸ್ವಂತ ಅನುಭವದ ಮಾತು. ಏಕೆಂದರೆ ನಾನು ವಿರೋಧಪಕ್ಷದಲ್ಲಿ ಮಾನ್ಯ ಚಂದ್ರೇಗೌಡರ ಕೈ ಕೆಳಗೆ ಉಪ-ನಾಯಕನಾಗಿ ಕೆಲಸ ಮಾಡಿದ್ದೇನೆ. ರಾಜ್ಯದ ನಾಲ್ಕು ಜನ ಮುಖ್ಯಮಂತ್ರಿಗಳ ಕೈ-ಕೆಳಗಡೆ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಆದರೆ ನನಗೆ ಆಶ್ಚರ್ಯವಾಯಿತು. ನಮ್ಮ ಕರ್ನಾಟಕ ಸ್ಟೇಟ್ ಕಂಟ್ರಾಕ್ಟ್‌ರ್ಸ್ ಅಸೋಸಿಯೇಷನ್‌ನವರೆಲ್ಲಾ ಒಂದು ದಿವಸ ಬೆಳಿಗ್ಗೆ ವಾಕಿಂಗ್ ಮಾಡಿಕೊಂಡು ನಮ್ಮ ಮನೆಗೆ ಬಂದುಬಿಟ್ಟಿದ್ದರು. ವಿಧಾನಸಭೆ ಅಧಿವೇಶನ ಬರುತ್ತಿದೆ. ನಾವೆಲ್ಲ

11ನೇ ತಾರೀಖು ಮೆರವಣಿಗೆ ಮಾಡುತ್ತಿದ್ದೇವೆ. ನೀವು ಈ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳಿದರು. ನಾನು ಅವರಿಗೆ ಹೇಳಿದೆ. ನೀವು ಏಕೆ ಬರುವುದಕ್ಕೆ ಹೋದಿರಿ? ನಿಮಗೆ ತೊಂದರೆಯಾಗುತ್ತದೆಂದೂ ಸಹ ಹೇಳಿದೆ. ಆಗ ಅವರು, ಇಲ್ಲಾ, ಇಲ್ಲಾ ಇದನ್ನು ನೀವು ಪ್ರಸ್ತಾಪ ಮಾಡಲೇಬೇಕು. ನಾವೆಲ್ಲ ಬಹಳ ಸುಸ್ತಾಗಿ ಹೋಗಿದ್ದೇವೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟು ಕೊಟ್ಟು, ಎಂದು ಹೇಳಿದರು ಮಾನ್ಯ ಮುಖ್ಯಮಂತ್ರಿಗಳಿಗೆ ಅವರು ಒಂದು ಪತ್ರವನ್ನು ಸಹ ಬರೆದಿದ್ದಾರೆ. "ನಮ್ಮ ಗುತ್ತಿಗೆದಾರರ ಸಂಕಷ್ಟಗಳನ್ನು ಸಾಕಷ್ಟು ಭಾರಿ ನಿಮ್ಮ ಗಮನಕ್ಕೆ ತಂದಿರುವುದಲ್ಲದೇ ಇದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕೆಂದು ಮನವಿ ಸಲ್ಲಿಸಿ, ಅತಿ ಮುಖ್ಯವಾದ ಕಾಮಗಾರಿಗಳನ್ನು ಮುಗಿಸಿ ಹಲವಾರು ವರ್ಷಗಳಾದರೂ ಗುತ್ತಿಗೆದಾರರಿಗೆ ಹಣವನ್ನು ಪಾವತಿ ಮಾಡಿರುವುದಿಲ್ಲ. ಇದರ ಬಗ್ಗೆ ಕೂಲಂಕಷವಾಗಿ ಮನವಿಯನ್ನು ಹಲವಾರು ಬಾರಿ ಅರ್ಪಿಸಿದ್ದೇವೆ. ಆದರೆ ಇದುವರೆಗೂ ತಮ್ಮಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬಾರದೇ ಇರುವುದರಿಂದ ನಮ್ಮ ರಾಜ್ಯದ ಗುತ್ತಿಗೆದಾರರು ಸಾಕಷ್ಟು ಸಂಕಷ್ಟಕ್ಕೆ ಈಡಾಗಿ ಆರ್ಥಿಕವಾಗಿ ತೊಂದರೆಗೆ ಒಳಗಾಗಿರುವುದರಿಂದ ನಾವು ಅನ್ಯ ಮಾರ್ಗವಿಲ್ಲದೇ ಚಳುವಳಿಯ ದಾರಿಯನ್ನು ಹಿಡಿದು ಗುತ್ತಿಗೆದಾರರು ಆತ್ಮಹತ್ಯೆಯನ್ನು ಕೂಡ ಮಾಡಿಕೊಳ್ಳುವಂತಹ ಹಂತಕ್ಕೆ ನಾವು ತಲುಪಿದ್ದೇವೆ" ಎನ್ನತಕ್ಕಂಥ ಮನವಿಯನ್ನು ಅವರು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಇವತ್ತು ಸುಮಾರು 10-12 ಸಾವಿರ ಜನ ಗುತ್ತಿಗೆದಾರರು ಸಣ್ಣ ಮತ್ತು ಮಧ್ಯಮವರ್ಗದವರು ಇಡೀ ರಾಜ್ಯದಿಂದ ಎಲ್ಲಾ ಕಡೆಗಳಿಂದಲೂ ರಾಜಧಾನಿಗೆ ಬಂದು ವಿಧಾನಸಭಾ ಅಧಿವೇಶನ ನಡೆಯುತ್ತಿದೆ ಎಂದು ಗುತ್ತಿಗೆದಾರರು ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಮ್ಮೆ ಸಾರ್ವಜನಿಕವಾಗಿ ಮಾತನಾಡುತ್ತಿದ್ದಾಗ, ಹಿಂದಿನ ಸರ್ಕಾರವಿದ್ದಾಗ ಚೆಕ್‌ಗಳೆಲ್ಲಾ ಗಾಳಿಪಟದಂತೆ ಅಲ್ಲಾಡುತ್ತಿದ್ದವು, ಈ ನಮ್ಮ ಸರ್ಕಾರದಲ್ಲಿ ಚೆಕ್‌ಗಳಿಗೆಲ್ಲಾ ಬಹಳ ದೊಡ್ಡ ಶಕ್ತಿ ಬಂದಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದನ್ನು ನಾನು ಕೇಳಿದ್ದೇನೆ. ಅದು ಪತ್ರಿಕೆಗಳಲ್ಲಿ ಕೂಡ ವರದಿ ಆಗಿದೆ. ಅವರು ಹೇಳಿರುವುದು ಸತ್ಯ. ಇನ್ನೊಂದು ಮಾತನ್ನೂ ಸಹ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ದಿವಸ ಮೈಸೂರಿನಲ್ಲಿ ಮಾತನಾಡುತ್ತಿದ್ದಾಗ ಹೇಳಿದ್ದಾರೆ. ಮೈಸೂರು ನಗರದ ಚುನಾವಣೆ ಸ್ವಾಭಾವಿಕವಾಗಿ ಅಡಳಿತದ ಪಕ್ಷದ ನಾಯಕರಿಗೆ ಸಂತೋಷವನ್ನು ತಂದಿರುತ್ತದೆ. ಆದ್ದರಿಂದ ಆ ಸಂತೋಷದ ಭರದಲ್ಲಿ ನಾನು ಬಹಳ ಬಲಯುತವಾದ ವೃಕ್ಷವಾಗಿ ಬೆಳೆದಿದ್ದೇನೆ. ನನ್ನ ಫಲ ಈಗ ಯಾರಿಗೆ ಬೇಕಾದರೂ ಕೊಡಬಹುದು, ಇನ್ನೂ 5 ವರ್ಷಗಳ ಕಾಲ ನಾನು ಇಲ್ಲಿ ಕಾಂಗ್ರೇಸ್ ಪಕ್ಷದ ಸರ್ಕಾರವನ್ನು ನಡೆಸುತ್ತೇನೆ. ಒಟ್ಟು ಏಳೂವರೆ ವರ್ಷಗಳ ಕಾಲ ಕಾಂಗ್ರೇಸ್ ಪಕ್ಷದ ಸರ್ಕಾರವನ್ನು ನಾನು ಮತ್ತೆ ಅಧಿಕಾರಕ್ಕೆ ತರುತ್ತೇನೆ ಎನ್ನತಕ್ಕಂಥಾ ಮಾತನ್ನು ಹೇಳಿದ್ದೀರಾ ಬಹಳ ಭದ್ರವಾಗಿ ನಾನು ಇದ್ದೇನೆ ಎನ್ನತಕ್ಕಂಥಾ ಮಾತನ್ನು ಸಹ ಅವರು ಹೇಳಿದ್ದೀರೆ, ಬಹಳ ಸಂತೋಷ. ಆದರೆ ನಾನು ಈಗ ಮಾನ್ಯ ಮುಖ್ಯಮಂತ್ರಿಗಳಿಂದ ವಿವರಗಳನ್ನು ಈ ಸದನಕ್ಕೆ ಮತ್ತು ರಾಜ್ಯದ ಜನತೆಗಾಗಿ ಕೇಳತಕ್ಕಂಥಾದ್ದು, ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ತೋರಿಸಿದರಲ್ಲಾ ಚೆಕ್‌ಗಳು ಇವು ಖೋಟಾ ಚೆಕ್‌ಗಳೋ, ಆ ಥಾಪಾ ಕಾಗದ ಇತ್ತಲ್ಲಾ, ಆ ಬಗ್ಗೆ ಚರ್ಚೆ ಅಯಿತಲ್ಲ. ಆ ಥಾಪಾ ಕಾಗದದ ಹಾಗೆ ಇದೂ ಖೋಟಾ ಚೆಕ್‌ಗಳೋ ಅಥವಾ ಇಲಾಖೆಯವರೇ ಕೊಟ್ಟಿರತಕ್ಕಂಥ ಚೆಕ್‌ಗಳೋ ಎನ್ನತಕ್ಕಂಥಾದ್ದನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ವಿವರಗಳನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ಮಾನ್ಯ

ಅಧ್ಯಕ್ಷರೇ, ಬೆಂಗಳೂರು ಸಿಟಿ ಕಾರ್ಪೊರೇಷನ್‌ನಿಂದ ಸುಮಾರು 8 ತಿಂಗಳುಗಳಿಂದ ಬಿಲ್‌ಗಳ ಪೇಮೆಂಟ್ ಆಗಿಲ್ಲ. ಕಾರ್ಪೊರೇಷನ್ ಕಮೀಷನರ್ ಹತ್ತಿರ ಹೋದರೆ ದುಡ್ಡಿಲ್ಲ ಸಾರ್ ನಾನೇನು ಮಾಡಲಿ ಎನ್ನತಕ್ಕಂಥಾ ಮಾತನ್ನು ಹೇಳುತ್ತಾರೆ. ಈಗ ಗುತ್ತಿಗೆದಾರರ ಅಸೋಸಿಯೇಷನ್‌ನವರು ಹೇಳಿರುವುದು ಏನೆಂದರೆ 1200 ಕೋಟಿ ರೂಪಾಯಿಗಳು ಬಾಕಿ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದೆಲ್ಲಾ ಕೆಲಸ ಮಾಡಿ ತಿಂಗಳುಗಟ್ಟಲೆ ಅಲ್ಲ, ವರ್ಷನು ಗಟ್ಟಲೆ ಆಗಿದೆ. ಅವರು ಕೆಲಸ ಮಾಡಿ ಡಿಪಾರ್ಟ್‌ಮೆಂಟ್‌ನವರು ಬಿಲ್‌ಗಳನ್ನು ಪಾಸ್ ಮಾಡಿ ಟ್ರಜರಿಗೆ ಕಳುಹಿಸಿಕೊಟ್ಟು ಮೇಲೆ ಅಲ್ಲಿಂದ ದುಡ್ಡು ಬರಲಿಲ್ಲವೆಂದು ಹೇಳುವುದಾದರೆ, ಈಗ ಮಾನ್ಯ ಧರ್ಮಸಿಂಗ್ ಲೋಕೋಪಯೋಗಿ ಸಚಿವರು ಇಲ್ಲೇ ಇದ್ದಾರೆ. ಸ್ವಾಮಿ, ಆಡಳಿತ ಪಕ್ಷದ ಶಾಸಕರು ಬಹಳ ಮುಖ್ಯ ನಿಮಗೆ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ವಿರೋಧಪಕ್ಷದ ಶಾಸಕರಿಗಿಂತ ಆಡಳಿತಪಕ್ಷದ ಶಾಸಕರು ಬಹಳ ಮುಖ್ಯ ನಿಮಗೆ. ಅವರನ್ನು ಕೇಳಿ, ಅವರವರ ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರದಲ್ಲಿ ಹೆಚ್ ಆವ್ ಅಕೌಂಟ್ 305 ರಲ್ಲಿ ಕೆಲಸ ಮಾಡಿರುವುದು ಇದ್ದರೆ ಸ್ವಲ್ಪ ಲೇಟಾಗುತ್ತದೆ ಎಂದು ನಾನು ಅರ್ಥ ಮಾಡಿಕೊಳ್ಳಬಲ್ಲೇ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ 200 ಕೋಟಿ ರೂಪಾಯಿಗಳಷ್ಟು ಫೆಂಡಿಂಗ್ ಬೆಲ್ ಇದೆ ಅಂತ ಹೇಳಿದರೆ ನಾನು ಒಪ್ಪಿಕೊಳ್ಳಬಲ್ಲೆ. ಆದರೆ ಕೇಂದ್ರ ಸರ್ಕಾರದಿಂದ ನಬಾರ್ಡ್ ಕೆಲಸಗಳೆಲ್ಲಾ .....ಏಕೋ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಗೆ ನಾನು ಮಾತನಾಡಿದಾಗಲೆಲ್ಲಾ ಬಹಳ ಬೇಸರವಾಗಿತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಬೇಸರ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀವು ಬೇಡ ಅಂದರೆ ನಾನು ನಿಲ್ಲಿಸಿಬಿಡುತ್ತೇನೆ. ಆದರೆ ಇವರೇ ನನಗೆ ಪಾಠ ಹೇಳಿ ಕೊಟ್ಟವರು ಮಾನ್ಯ ಅಧ್ಯಕ್ಷರೇ,

ಶ್ರೀ ಡಿ.ಬಿ. ಚಂದ್ರೇಗೌಡ:- ಶೂನ್ಯ ವೇಳೆಯಲ್ಲಿ ರಾಜಕೀಯ ಭಾಷಣ ಮಾಡುವುದಕ್ಕೆ ಬರುತ್ತದೆಯೇ? ಇದನ್ನೇ ನಾನು ಪದೇ ಪದೇ ಹೇಳುತ್ತಿರುವುದು ತಾವು ಅಪ್ಪಣೆ ಕೊಟ್ಟಿದ್ದೀರಿ.

ಶ್ರೀ ಪಿ.ಜಿ.ಆರ್ ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಅಲ್ಲಿ ಗುತ್ತಿಗೆದಾರರು ವಿಧಾನಸೌಧದ ಎದುರುಗಡೆ ಪ್ರತಿಭಟನೆ ಮಾಡುತ್ತಿದ್ದಾರೆ. ನಾವು ಇಲ್ಲಿ ಬಾಯಿಗೆ ಬೀಗ ಹಾಕಿಕೊಂಡು ಕುಳಿತುಕೊಂಡರೆ ಆಗುವುದಿಲ್ಲ. ನಿಮ್ಮ ತಾಳಕ್ಕೆ ತಕ್ಕ ಹಾಗೆ ನಾವು ಕುಣಿಯುವುದಕ್ಕೆ ಆಗುವುದಿಲ್ಲ. ನಮಗೆ ಜನ ಬೇಕು. ನಮ್ಮನ್ನು ಆ ಜನ ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತಾರೆ. ಅನಕ್ಕೋಸ್ಕರ ನಮಗೆ ಏನು ಅನ್ನಿಸುತ್ತದೆ ಅದನ್ನು ನಿರ್ವಂಚನೆಯಿಂದ ಹೇಳತಕ್ಕಂಥಾದ್ದು ನಮ್ಮ ಧರ್ಮ. ಇಲ್ಲದಿದ್ದರೆ ನಮ್ಮ ಕರ್ತವ್ಯದಲ್ಲಿ ನಾವು ವಿಫಲವಾಗುತ್ತೇವೆ. ನೀವು ವಿರೋಧ ಪಕ್ಷದಲ್ಲಿದ್ದಾಗ ಏನು ಮಾಡಿದಿರಿ ಎಂದು ನಾನು ಕೇಳುವುದಕ್ಕೆ ಬಯಸುವುದಿಲ್ಲ. ನಾನು ವಿರೋಧ ಪಕ್ಷದಲ್ಲಿದ್ದಾಗ ನನಗೆ ನೀವೇ ತರಬೇತಿ ಕೊಟ್ಟವರು. ನಾನು ರಾಜ್ಯ ಸಭೆಯಲ್ಲಿದ್ದೆ, ಲೋಕಸಭೆಯಲ್ಲಿದ್ದೆ ವಿಧಾನಸಭೆಯಲ್ಲಿದ್ದೆ, ವಿಧಾನಸಭೆಯ ಅಧ್ಯಕ್ಷನಾಗಿದ್ದೆ, ಆದ್ದರಿಂದ ಈ ರೀತಿ ಮಾಡಯ್ಯ ಎಂದು ಹೇಳಿ ತರಬೇತಿ ಕೊಟ್ಟವರೇ ನೀವು. ಶೂನ್ಯ ವೇಳೆಯಲ್ಲಿ ಒಂದು 5 ನಿಮಿಷ ಮಾತನಾಡಿದರೆ ಏನಾಗುತ್ತದೆ? ಅಲ್ಲಿ ತೀರಾ ಬರ್ನಿಂಗ್ ಪ್ರಾಬ್ಲಂ ಇದೆ. ಡೆವಲಪ್‌ಮೆಂಟ್ ವರ್ಕ್ಸ್ ಎಲ್ಲಾ ನಿಂತು ಹೋಗಿದೆ. ಮಾನ್ಯ ಮುಖ್ಯಮಂತ್ರಿಗಳು ಸಿಕ್ಕಿದ್ದಾರೆ. ಮಾತನಾಡೋಣ ಎಂದು ಹೇಳಿದರೆ ನೀವು ಅವರ ಕಿವಿಗೆ ಏನೋ ಹೇಳುವುದಕ್ಕೆ ಹೋಗುತ್ತಿದ್ದೀರಿ ತಾವು ಬೇಕಾದರೆ ಆಡಳಿತ ಪಕ್ಷದ

ಶಾಸಕರನ್ನು ಕೇಳಿ ನಬಾರ್ಡ್‌ನಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ತೆಗೆದುಕೊಂಡು ಬರತಕ್ಕಂಥ ಸಾಲ ಅದು. ನೀವು ಖರ್ಚು ಮಾಡಿದಂತೆಲ್ಲಾ ಅವರು ದುಡ್ಡು ಕೊಡುತ್ತಾರೆ. ಆ ಕೆಲಸಗಳು ಇವತ್ತು ಸಂಪೂರ್ಣವಾಗಿ ಸ್ಥಗಿತವಾಗಿರತಕ್ಕಂಥಾದ್ದನ್ನು ತಾವು ನೋಡುತ್ತಿದ್ದೀರಿ. ಮಾನ್ಯ ಲೋಕೋಪಯೋಗಿ ಸಚಿವರು ಹೆಡ್ ಆಫ್ ಅಕೌಂಟ್ 3054ನಲ್ಲಿ ಏನು ಮಂಜೂರು ಮಾಡಿದರು ಆ ಕೆಲಸಗಳ ಪೆಂಡಿಂಗ್ ಬಿಲ್‌ಗಳು ಇರತಕ್ಕಂಥ ನಾನು ಅರ್ಥಮಾಡಿಕೊಳ್ಳಬಲ್ಲೆ ಮೇಜರ್ ಇರಿಗೇಷನ್‌ನಲ್ಲಿ ಬರತಕ್ಕಂಥ ಬಿಲ್‌ಗಳ ದುಡ್ಡು ಏನು ಇದೆ ಅದನ್ನು ಬೇರೆ ಬೇರೆ ಸಂಸ್ಥೆಗಳಿಂದ ನೀರಾವರಿ ನಿಗಮಗಳು ಎಂದು ಮಾಡಿ, ಕೃಷ್ಣಾ ಜಲಭಾಗ್ಯ ನಿಗಮ ಎಂದು ಮಾಡಿ, ಅವುಗಳಿಂದ ಸಾಲ ತೆಗೆದುಕೊಂಡು ಬಂದಿರತಕ್ಕಂಥಾದ್ದು, ಇದನ್ನು ಏನಾದರೂ ತಾವು ಡೈವರ್ ಮಾಡಿದ್ದೀರಾ ಅಥವಾ ವರ್ಲ್ಡ್ ಬ್ಯಾಂಕ್‌ನಿಂದ ತೆಗೆದುಕೊಂಡಿರತಕ್ಕಂಥ ಸಾಲ ಏನು ಇದೆ ಅದನ್ನು ರೀಸ್ಟ್ರಕ್ಚರಿಂಗ್ ಅಂತ ಮಾಡಿ ಸಂಬಳಗಳಿಗೆ ಏನಾದರೂ ಉಪಯೋಗಿಸಿಕೊಂಡಿದ್ದೀರಾ? ಇವುಗಳಿಗೆಲ್ಲಾ ಮಾನ್ಯ ಮುಖ್ಯಮಂತ್ರಿಗಳೇ ಸ್ವತಃ ಹಣಕಾಸಿನ ಮಂತ್ರಿಗಳಾಗಿರುವುದರಿಂದ ಇದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಕೊನೆಯದಾಗಿ, ನಾನು ಇನ್ನೊಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಹಣಕಾಸಿನ ವಿಚಾರದಲ್ಲಿ ಈ ಸಾರಿ ನಾನೇ ಮಾತನಾಡಬೇಕೆಂದು ಇದ್ದೇನೆ ಆಗ ಕೆಲವು ಸಲಹೆಗಳನ್ನು ಸಹ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುವವನಿದ್ದೇನೆ. ಮತ್ತು ಲೋಕಾಯುಕ್ತರವರು ಭ್ರಷ್ಟಾಚಾರದ ವಿಚಾರಗಳನ್ನು ಬಯಲಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಂತಹ ವಿಚಾರಗಳನ್ನು ಚರ್ಚೆ ಮಾಡಲು ನಾನು ಸಿದ್ಧವಾಗಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ ಆಗ ಇನ್ನೂ ಅನೇಕ ಮಹತ್ವದ ವಿಚಾರಗಳನ್ನು ಈ ಸದನದಲ್ಲಿ ಹೇಳತಕ್ಕಂಥಾದ್ದು ಇದೆ ಈ ಸಂದರ್ಭದಲ್ಲಿ ಅವುಗಳನ್ನು ಹೇಳುತ್ತೇನೆ. ಈಗ ನಿಯಮಗಳ ಪ್ರಕಾರ ಮಾತನಾಡಿಬಿಡಬೇಕೆಂದು ಹೇಳಿರುವುದರಿಂದ ನಾನು ಅದನ್ನು ಹೇಳಲು ಹೋಗದೆ ಎರಡೇ ವಿಚಾರಗಳನ್ನು ಹೇಳುತ್ತೇನೆ. ಸ್ವಾಮಿವಾರದಲ್ಲಿ ಒಂದೇ ದಿನ ಟ್ರಜರಿ ಕೆಲಸ ಮಾಡುವಂತಾಥದ್ದು, ಅವರಿಗೆಲ್ಲಾ ತಾವು ಯಾರುದೇ ಚೆಕ್ ಪಾಸ್ ಮಾಡಬಾರದು ಎಂದು ಹೇಳಿರುವುದರಿಂದ ಶುಕ್ರವಾರ ಮಧ್ಯಾಹ್ನ ಒಂದು 2-3 ಗಂಟೆಗಳು ಮಾತ್ರ ಅಪರೇಟ್ ಮಾಡುತ್ತಾರೆ. ಅವರಿಗೆ ಈಗ ಆನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಅದು ಇರಲಿ. ಇನ್ನೊಂದು ವಿಚಾರ ಏನು ಹೇಳಿದ್ದಾರೆ? ಈ ಗುತ್ತಿಗೆದಾರರು ಅಂದರೆ ಇದು ವಾಸ್ತವಾಂಶ. ವಿಶ್ವ ಬ್ಯಾಂಕಿನಲ್ಲಿ ನೆಪದಲ್ಲಿ ದೊಡ್ಡ ದೊಡ್ಡ ಕಾಮಗಾರಿಗಳನ್ನು ಒಗ್ಗೂಡಿಸಿ ಟೆಂಡರ್ ಕರೆಯುವ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಈ ದೊಡ್ಡ ಪ್ಯಾಕೇಜ್‌ಗಳು ಕರ್ನಾಟಕದ ಯಾವ ಒಬ್ಬ ಗುತ್ತಿಗೆದಾರನಿಗೂ ಸಿಗದೇ ಇರುವ ಪರಿಸ್ಥಿತಿಯಲ್ಲಿವೆ. ಸಾಮಾನ್ಯವಾಗಿ ಎಲ್ಲಾ ದೊಡ್ಡ ದೊಡ್ಡ ಗುತ್ತಿಗೆಗಳು ಹೊರರಾಜ್ಯದ ಗುತ್ತಿಗೆ ದಾರರಿಗೆ ಸಿಕ್ಕಿವೆ. ಅಂದಾಜು ಪಟ್ಟಿಗಿಂತ ಬಹು ಹೆಚ್ಚಿನ ದರದಲ್ಲಿ ಅವಕಾಶ ಮಾಡಿ ಕೊಟ್ಟಿದ್ದಾರೆ. ತಮಗೆ ತಿಳಿದಿರುವಂತೆ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ರಾಜ್ಯದ 27 ಜಿಲ್ಲೆಗಳಲ್ಲಿ ಹೆದ್ದಾರಿಗಳಲ್ಲಿ ಬಿಲ್ಲೆಗೊಂದಂತೆ ಪ್ಯಾಕೇಜ್‌ಗಳನ್ನು ಮಾಡಿ ಹೆಚ್ಚಿನ ಕಾಮಗಾರಿಗಳನ್ನು ಹೊರರಾಜ್ಯದ ಗುತ್ತಿಗೆದಾರರು ನಿರ್ವಹಿಸಲು ಅನುವು ಮಾಡಿ ಕೊಟ್ಟಿದೆ. ನಮಗೆ ಬಂದಿರುವ ಮಾಹಿತಿಯ ಪ್ರಕಾರ ಎರಡು ವರ್ಷಗಳಾದರೂ ಸಹ ಶೇಕಡ 25ರಷ್ಟು ಕಾಮಗಾರಿಗಳು ತಲುಪಿಲ್ಲ ಪ್ರಗತಿಯ ಹಂತವನ್ನು ತಲುಪಿಲ್ಲ. ಇಷ್ಟಲ್ಲದೇ ಪ್ಯಾಕೇಜ್ ಪದ್ಧತಿಯಿಂದ ನಿರ್ವಹಿಸಿದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಾರ್ವನಿಕರಿಂದ

ದೂರುಗಳು ಬಂದಿವೆ. ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ, ಇವತ್ತು ಅಭಿವೃದ್ಧಿ ಕೆಲಸಗಳೇನು? ಇವೆ ಅವಕ್ಕೆ ಇದೇನು ಟ್ರಜರಿ ಎಂದಾಕ್ಷಣ ದುಡ್ಡು ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ ಅಲ್ಲಿಂದ ಬರಬೇಕು ಇಲ್ಲಿ ಖರ್ಚು ಮಾಡಬೇಕೆಂಬುದು ನಮಗೂ ಅರ್ಥವಾಗುತ್ತದೆ. ಆದರೆ ಯಾವುದು ಬಹಳ ಪ್ರೆಯಾರಿಟಿ ಇರತಕ್ಕಂಥಾದ್ದು ಇದೆ. ಅಭಿವೃದ್ಧಿ ಕೆಲಸಗಳು ಏನಿವೆ. ಅದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಬಹುದು? ಪರಿಸ್ಥಿತಿ ಏನು ಎನ್ನುವುದನ್ನು ರಾಜ್ಯದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದಾಗಿ ತಿಳಿಸಬೇಕೆಂದು ಹೇಳುತ್ತೇನೆ. ಕೊನೆಯದಾಗಿ, ನಾನಾಗಲೇ ಹೇಳಿದೆ. ಇನ್ನೂ ಕೆಲವು ವಿಚಾರಗಳನ್ನು ಹೇಳುವುದಿದೆ ಎಂದು ಪಾರದರ್ಶಕ ಬೆಲೆ ತಂದು, ಯಾರಯಾವುದನ್ನು ಅದ್ಯತೆಯಲ್ಲಿ ಇಟ್ಟುಕೊಂಡಿದ್ದೀರಿ? ಏಕೆ ಕೊಟ್ಟಿದ್ದೀರಿ ಎಂಬುದು ನಮಗೆ ಬೇಕಾಗುತ್ತದೆ. ಅದರ ಬಗ್ಗೆ ವಿವರಣೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಬಯಸುತ್ತೇನೆ. ಇದು ಶೂನ್ಯವೇಳೆಯಾದರೂ ರಾಜ್ಯದ ಮಹತ್ವವನ್ನು ಅರಿತು ತಾವು ಅವಕಾಶ ಮಾಡಿಕೊಟ್ಟಿದ್ದೀರಿ ಮತ್ತು ಮಾನ್ಯಮುಖ್ಯಮಂತ್ರಿಗಳು ಸಮಾಧಾನದಿಂದ ಕೇಳಿದ್ದಾರೆ.

- ಗೊಂದಲ -

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:- ನಿಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:- ಅವರು ಏನು ಹೇಳಿದ್ದಾರೆ. ಅದನ್ನು ನಾನು ರಿಪೀಟ್ ಮಾಡುವುದಿಲ್ಲ. ನಮ್ಮ ಪರಿಸ್ಥಿತಿಯನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಸಿಕ್ಕದೇ ಹೋದರೆ ಏನು ಮಾಡುವುದು?

ಅಧ್ಯಕ್ಷರು:- ತಾವು ಏನು ಹೇಳಬೇಕೋ ಅದನ್ನು ನಿಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ.

ಶ್ರೀ ಎಸ್.ಎಂ ಕೃಷ್ಣ (ಮುಖ್ಯಮಂತ್ರಿಗಳು):- ಅವರು ಹೇಳಿದಂಥ ಎಲ್ಲಾ ವಿಚಾರಗಳಿಗೂ ಕೂಲಂಕುಷವಾದ ಉತ್ತರವನ್ನು ಕೊಡುವುದಕ್ಕೆ ಆ ಬಗ್ಗೆ ಸ್ಟೇಟ್‌ಮೆಂಟ್ ಮಾಡಲು ನಾನು ಪ್ರಯತ್ನ ಮಾಡುತ್ತೇನೆ. ಇವತ್ತೇ ಕೊಡುವುದಿಲ್ಲ. ನಿಮಗೆ ಸುಲಭವಾಯಿತು. ಏಕೆಂದರೆ ಕಂಟ್ರಾಕ್ಟ್‌ದಾರರು ಏನು ಬರೆದುಕೊಟ್ಟಿದ್ದಾರೋ ಅದನ್ನು ಇಲ್ಲಿ ಓದಿದಿರಿ. ಏನೆಂದರೆ, ಟೆಂಡರ್ ಕರೆಯಬಾರದು ಇತ್ಯಾದಿ. ಒಟ್ಟಿನಲ್ಲಿ ಅವರು ಏನೇನು ಹೇಳಿದ್ದಾರೋ ಅದಕ್ಕೆಲ್ಲಾ ನಾನು ಉತ್ತರ ಕೊಡುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ:- ಉತ್ತರವನ್ನು ಇವತ್ತು ಕೊಡುತ್ತೀರೋ ಅಥವಾ ನಾಳೆ ಕೊಡುತ್ತೀರೋ?

Mr Speaker you can't compel.....

ಶ್ರೀ ಎಸ್.ಎಂ. ಕೃಷ್ಣ:- ನಾನು ಮುಂದಿನ ಸೋಮವಾರ ಅಥವಾ ಮಂಗಳವಾರ ಉತ್ತರ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬಹಳ ಮುಖ್ಯವಾಗಿ, ತಾವು ರಾಜ್ಯದ ಹಣಕಾಸಿನ ಸಚಿವರಾಗಿರತಕ್ಕಂಥವರು. ನಾನು ಗುತ್ತಿಗೆದಾರರ ಪರವಾಗಿ ವಾದ ಮಾಡುತ್ತಾ ಇಲ್ಲ. ತಾವು ಕಷ್ಟವಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತೀರಿ. ನಾನು ಇಲ್ಲೇನೋ ಗುತ್ತಿಗೆದಾರರ ಪರವಾಗಿ ಪ್ಲೀಡ್ ಮಾಡುತ್ತಿದ್ದೇನೆಂದು ಭಾವನೆ ಬರುತ್ತಿದೆ. ಇಲ್ಲಿ ನಾವಾಗಲೀ ಅಥವಾ ವಿರೋಧ ಪಕ್ಷದ ನಾಯಕರಾಗಲೀ ಆ ಕೆಲಸ ಮಾಡುತ್ತಾ ಇಲ್ಲ. ತಾವು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಬೇಡಿ. Our concern is, we want to know from the Hon'ble Chief Minister - and it is our right to know.....

ಅಧ್ಯಕ್ಷರು:- ಉತ್ತರವನ್ನು ಹೇಳುತ್ತೇನೆಂದು ಹೇಳುತ್ತಿದ್ದಾರಲ್ಲಾ. Why do you presume it ?

Is:- I am not Presuming.

Sri P.G. Sindhya:- What I am requesting the Hon'ble Chair is this. ಟ್ರಜರಿ ಬ್ಯಾನ್ ಆಗಿದೆ. ಅಭಿವೃದ್ಧಿ ಕೆಲಸಗಳೆಲ್ಲಾ ಸ್ಟಾಪ್ ಆಗಿದೆ. ಅದಕ್ಕೋಸ್ಕರ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:- ಯಾವುದೂ ಸ್ಟಾಪ್ ಆಗಿಲ್ಲ, ಯಾವುದೂ ಬ್ಯಾನ್ ಆಗಿಲ್ಲ. ಇವುಗಳೆಲ್ಲವುಗಳಿಗೂ ಕೂಲಂಕುಷವಾಗಿ ಉತ್ತರ ಕೊಡುತ್ತೇನೆ. ಸ್ಟೇಟ್‌ಮೆಂಟ್ ಮಾಡುತ್ತೇನೆ.

ಅಧ್ಯಕ್ಷರು:- ಈಗ ಸದನವನ್ನು ಮಧ್ಯಾಹ್ನ 3-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3-0 ಗಂಟೆಗೆ ಸೇರಲು ನಿಶ್ಚಯಿಸಿತು.

ಸದನವು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಪುನರಾರಂಭಗೊಂಡಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿದ್ದರು)

(4) ಮಂತ್ರಿಗಳ ಹೇಳಿಕೆ

(ಅ) ರಾಜ್ಯದಲ್ಲಿ ಬರಪರಿಹಾರದ ಬಗ್ಗೆ ಮಾನ್ಯ ಕೃಷಿ ಸಚಿವರಿಂದ ಉತ್ತರ

ಶ್ರೀ ವಿ.ಎಸ್ ಕೌಜಲಗಿ (ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೇ, ನಾನು ಕೃಷಿಗೆ ಸಂಬಂಧಿಸಿದಂತೆ ಉತ್ತರ ಕೊಡುತ್ತೇನೆ. ಕಳೆದೆರಡು ದಿವಸಗಳಿಂದ ನಿಯಮ 69ರ ಮೇರೆಗೆ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಗುಂಡಪ್ಪ ವಕೀಲ್ ಶ್ರೀ ಭೈರೇಗೌಡರು, ಶ್ರೀ ಜಯಪ್ರಕಾಶ್ ಹೆಗಡೆ ಮತ್ತು ಇನ್ನೂ ವಿರೋಧಪಕ್ಷದ ನಾಯಕರು ಮುಂಗಾರು ಮಳೆಯ ಅಭಾವದಿಂದಾಗಿ ಉಂಟಾಗಿರುವ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಸಿದರು. ಇದರ ಬಗ್ಗೆ ನಾನು ಹೇಳುತ್ತೇನೆ. ಈ ದೇಶದಲ್ಲಿ ನಮ್ಮ ಆರ್ಥಿಕ ಪರಿಸ್ಥಿತಿ ಮಳೆಯನ್ನೆ ಅವಲಂಬಿಸಿದೆ. ನಾವು ವರುಣನ ದಾರಿಯನ್ನು ಕಾಯುತ್ತಾ ಕಾಯುತ್ತಾ, ಪ್ರತಿಸಲ ಮಳೆ ಕಡಿಮೆಯಾಗಿ ಅಭಾವವು ತಲೆದೋರಿ ಕುಡಿಯುವ ನೀರು ಒದಗಿಸಲು ಮತ್ತು ಬೆಳೆಹಾನಿ ತಡೆಯುವ ಬಗ್ಗೆ ನಾವು ಪ್ರಯತ್ನಿಸುತ್ತಿದ್ದೇವೆ. ಆದರೆ ಈ ದೇಶದಲ್ಲಿ ನಾವು